
ಇಲ್ಲವೇ ಯಾವುದೇ ಸಾಮಾಜಿಕ ಕ್ರಿಯಾಶೀಲತೆಯಿಂದ ಏರ್ಪಡುವ ಸಂವಹನದ ನಿಲುವುಗಳಿಂದ ಒಂದು ಬಗೆಯ ನಿರ್ಲಿಪ್ತತೆಯನ್ನು ಇಲ್ಲಿ ಕಾಪಾಡಲಾಗುತ್ತದೆ. ಅಷ್ಟೇ ಅಲ್ಲದೆ, ಡಾರ್ವಿನಿಯನ್ ವಿಕಾಸವಾದದ ವಿವರಣೆಯಿಂದಲೂ ಭಾಷೆಯನ್ನು ಕುರಿತ ಈ ವೈಜ್ಞಾನಿಕ ಚಿಂತನೆಯನ್ನು ಬಿಡುಗಡೆಗೊಳಿಸಿ ಇಲ್ಲಿ ಚರ್ಚಿಸಲಾಗಿದೆ. ಈ ಬಗೆಯ ಬೌದ್ಧಿಕ ತಂತ್ರಗಳ ಕಾರಣದಿಂದಾಗಿಯೇ ಚಾಮ್‌ಸ್ಕಿಯನ್ನು ವಿಮರ್ಶಿಸುವಾಗಲೂ ಕೂಡ ವಿದ್ವಾಂಸರು ಒಂದು ಬಗೆಯ ಗೊಂದಲಕ್ಕೆ ಒಳಗಾಗುತ್ತಾರೆ.

1950ರ ದಶಕದಲ್ಲಿ ಸಾಂಪ್ರದಾಯಿಕ ಚಿಂತಕರ ವಿರುದ್ಧದ ಚಾಮ್‌ಸ್ಕಿಯ ದಾಳಿಗೆ ವಿಶೇಷ ಮಾನ್ಯತೆ ದೊರೆಯುವುದಕ್ಕೂ ಈತನು ಕಂಡುಕೊಂಡ ಅರಿವಿನ ದಾರಿಗಳೇ ಕಾರಣ ಎಂಬ ವಾಸ್ತವ ಈಗ ನಿಚ್ಚಳವಾಗಿದೆ. ಇಂತಹದೊಂದು ಬೌದ್ಧಿಕ ಸಾಹಸವನ್ನು ಚಾಮ್‌ಸ್ಕಿ ಒಬ್ಬಂಟಿಯಾಗಿಯೇ ನಿಭಾಯಿಸಿದ್ದು ಕೂಡ ಅತ್ಯಂತ ಗಮನಾರ್ಹವಾದ ಸಂಗತಿಯಾಗಿದೆ. ಆದರೆ ಇಂತಹ ಗೆಲುವುಗಳಿಗಾಗಿ ಚಾಮ್‌ಸ್ಕಿ ಅತ್ಯಂತ ದುಬಾರಿಯಾದ ಪರಿಣಾಮಗಳನ್ನು ಎದುರಿಸಬೇಕಾಯಿತು. ವಿಶೇಷವಾಗಿ 'ಲಿಂಗ್ವಿಸ್ಟಿಕ್ಸ್ ವಾರ್ಸ್'ಗೆ ಇಲ್ಲಿ ನಾಂದಿಯನ್ನು ಹಾಡಲಾಯಿತು (ಹೆಚ್.ಎ. ಹ್ಯಾರೀಸ್: 1993). 1957ರಲ್ಲಿ ಹೊರಬಂದ ಈತನ 'ಸಿಂಟ್ಯಾಕ್ಟಿಕ್ ಸ್ಟ್ರಕ್ಚರ್ಸ್' ಪುಸ್ತಕವು ಅಸಾಮಾನ್ಯ ಹಾಗೂ ಆಘಾತಕಾರಿ ಪ್ರಭಾವವನ್ನು ಬೀರಿತು. ಇಂತಹ ಕ್ರಾಂತಿಕಾರಿ ಪ್ರಭಾವಗಳಿಂದ ಬದುಕುಳಿಯದವರು ಅತ್ಯಂತ ಕಷ್ಟದಿಂದ ಮೆಚ್ಚುಗೆ ವ್ಯಕ್ತಪಡಿಸಬಹುದು. ಆದರೆ ಈ ಕ್ಷಣದಿಂದಲೇ ಯುದ್ಧಗಳ ಪ್ರಕೋಪವು ಮತ್ತಷ್ಟು ತೀವ್ರವಾಗಿ ಮುಂದುವರೆಯುತ್ತದೆ ಎಂದು ಹೆಚ್. ಮ್ಯಾಕ್ಲೇ (1971) ಈ ಲಿಂಗ್ವಿಸ್ಟಿಕ್ಸ್ ವಾರ್ ಅನ್ನು ಕುರಿತು ಬಣ್ಣಿಸುತ್ತಾನೆ.

ಭಾಷೆಯ ಅಧ್ಯಯನದ ದಾರಿಗಳನ್ನು ಚಾಮ್‌ಸ್ಕಿ ಶೋಧಿಸಿದ ವಿಧಾನವನ್ನೇ ಕ್ರಾಂತಿಕಾರಿ ಆಲೋಚನಾ ಕ್ರಮವೆಂದು ಬಣ್ಣಿಸಲಾಗಿದೆ. ಏಕೆಂದರೆ, ಭಾಷಾಶಾಸ್ತ್ರವನ್ನು ಕ್ರಾಂತಿಕಾರಿಗೊಳಿಸುವುದು ಮಾತ್ರವಲ್ಲದೇ, ಅದನ್ನೊಂದು ಆಧುನಿಕ ವಿಜ್ಞಾನವನ್ನಾಗಿ ರೂಪಿಸಿದ ಯಶಸ್ಸು ಮಾತ್ರ ಚಾಮ್‌ಸ್ಕಿಗೆ ಸೇರಿದ್ದು.




**ಆಲೋಚನಾ ಕ್ರಮದಲ್ಲಿ ಪಲ್ಲಟ**

ಜಾಗತಿಕ ಸನ್ನಿವೇಶದಲ್ಲಿ ನುಡಿ ಕುರಿತ ಚಿಂತನೆಯಲ್ಲಿ ಪ್ರಖರ ಮತ್ತು ತಾತ್ವಿಕ ಬೆಳವಣಿಗೆಗಳು ಆಗುವುದಕ್ಕೆ ನೋಮ್ ಚಾಮ್‌ಸ್ಕಿಯ ಕೊಡುಗೆ ಅಪಾರವಾಗಿದೆ. ಈ ಕೊಡುಗೆ ಕೇವಲ ಚಿಂತನೆಗಳ ಬೆಳವಣಿಗೆಗೆ ಮಾತ್ರ ಸಂಬಂಧಿಸಿಲ್ಲ, ಬದಲಾಗಿ ನುಡಿ ಕುರಿತ ಇಡೀ ಆಲೋಚನೆಯ ಕ್ರಮದಲ್ಲಿಯೇ ಬಹುದೊಡ್ಡ ಪಲ್ಲಟವನ್ನು ಮೂಡಿಸಿದೆ. ಪರಿಣಾಮವಾಗಿ, ಕಳೆದ ಆರೇಳು ದಶಕಗಳಲ್ಲಿ ನುಡಿ ಚಿಂತನೆಯ ಹೊಸ ವ್ಯಾಖ್ಯಾನಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಈ ಮಾತನ್ನು ಹೇಳುವಾಗ 'ಕಾರ್ಟಿಶಿಯನ್ ಲಿಂಗ್ವಿಸ್ಟಿಕ್ಸ್', 'ಲಾಂಗ್ವೇಜ್ ಆಂಡ್ ಥಾಟ್' ಮತ್ತು 'ನ್ಯೂ ಹೊರೈಜಾನ್ಸ್ ಇನ್ ದ ಸ್ಟಡಿ ಆಫ್ ಲ್ಯಾಂಗ್ವೇಜ್ ಆಂಡ್ ಮೈಂಡ್' ಎಂಬ ಮೂರು ಮಹತ್ವದ ಪುಸ್ತಕಗಳು ನನ್ನ ಗಮನದಲ್ಲಿವೆ. 'ಸಿಂಟ್ಯಾಕ್ಟಿಕ್ ಸ್ಟ್ರಕ್ಚರ್ಸ್', 'ಆಸ್ಪೆಕ್ಟ್ಸ್ ಆಫ್ ಸಿಂಟ್ಯಾಕ್ಟಿಕ್ ಥಿಯರಿ' ಎಂಬ ಪುಸ್ತಕಗಳ ಚರ್ಚೆಯ ಮೂಲಕವೇ ಚಾಮ್‌ಸ್ಕಿ ಭಾಷಾಶಾಸ್ತ್ರ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿದ್ದರು. ಈ ಪುಸ್ತಕಗಳು ಚಾಮ್‌ಸ್ಕಿಯ ಚಿಂತನೆಯ ತಳಹದಿಯ ವಿನ್ಯಾಸವನ್ನು ನಿಚ್ಚಳವಾಗಿ ಮನಗಾಣಿಸುತ್ತವೆ. ಹಾಗಾಗಿ